## ಆಸಕ್ತಿದಾಯಕ ಅಂಶಗಳು

ಭಿನ್ನಭಿನ್ನ ಸಮೀಕ್ಷೆಗಳಿಂದ ಹೊರಬಂದ ಕೆಲವು ಆಸಕ್ತಿದಾಯಕ ಅಂಶಗಳು ಹೀಗಿವೆ:

★ ಹೊರಸಂಬಂಧಗಳನ್ನು ಹೊಂದಿರುವ 56% ಗಂಡಸರು ಮತ್ತು 34% ಮಹಿಳೆಯರು ತಾವು ದಾಂಪತ್ಯದಲ್ಲಿ ಸುಖವಾಗಿದ್ದೇವೆ ಎಂದು ಹೇಳುತ್ತಾರೆ.

★ ವಿಚ್ಛೇದನಗಳಿಗೆ ಬಲವಾದ ಕಾರಣ ವಿವಾಹಬಾಹಿರ ಸಂಬಂಧವಲ್ಲ, ಹಣದ ಬಗೆಗಿನ ಭಿನ್ನಾಭಿಪ್ರಾಯಗಳು. ಹೊರಸಂಬಂಧದ ನಂತರವೂ 50%ಗಿಂತ ಹೆಚ್ಚಿನ ದಂಪತಿಗಳು ವಿಚ್ಛೇದನದ ಮೊರೆ ಹೋಗುವುದಿಲ್ಲ.

★ ಒಮ್ಮಿಂದೊಮ್ಮೆಲೇ ತೋರಿಸುವ ಅಸಡ್ಡೆ ಅಥವಾ ಅತಿಯಾದ ಪ್ರೀತಿ ಎರಡೂ ಸಂಗಾತಿ ಮೋಸ ಮಾಡುತ್ತಿರುವುದರ ಸೂಚನೆಯಾಗಿರಬಹುದು.

★ ನೇರವಾಗಿ ದೈಹಿಕ ಸಂಬಂಧವಿಲ್ಲದಿದ್ದರೂ ಅಂತರ್ಜಾಲದ ಮೂಲಕ ನಡೆಯುವ ಲೈಂಗಿಕ ಸಂಭಾಷಣೆಗಳು ಭಾವನಾತ್ಮಕ ಸೆಳೆತಗಳನ್ನು ಮೂಡಿಸುವುದರಿಂದ ಒಟ್ಟಾರೆ ದುಷ್ಪರಿಣಾಮಗಳು ಭಿನ್ನವಾಗಿರುವುದಿಲ್ಲ. ಸಾಮಾಜಿಕ ಜಾಲತಾಣಗಳು ಹಳೆಯ ಸ್ನೇಹಕ್ಕೆ ಮರುಜೀವ ತುಂಬಿ ದೈಹಿಕ ಸಂಬಂಧಕ್ಕೆ ಪ್ರಚೋದಿಸಬಹುದು. ಅಂತರ್ಜಾಲದ ಮೂಲಕ ವಂಚಿಸುವವರಲ್ಲಿ ಹೆಚ್ಚಿನವರು ಸ್ಮಾರ್ಟ್‌ಫೋನ್‌ಗಳಿಂದ ಸಂಪರ್ಕ ಸಾಧಿಸಿರುತ್ತಾರೆ.

★ ಕಚೇರಿಯ ಸಹೋದ್ಯೋಗಿಗಳ ನಡುವೆ ಮತ್ತು ಉದ್ಯೋಗದ ನಿಮಿತ್ತವಾಗಿ ನಡೆಯುವ ಪ್ರವಾಸದಲ್ಲಿ ವಿವಾಹಬಾಹಿರ ಸಂಬಂಧಗಳ ಸಾಧ್ಯತೆಗಳು ಹೆಚ್ಚಾಗಿರುತ್ತವೆ.

★ 9% ಪುರುಷರು ಮತ್ತು 14% ಮಹಿಳೆಯರು ಸಂಗಾತಿಯ ನಂಬಿಕೆಯ ದ್ರೋಹಕ್ಕೆ ಪ್ರತೀಕಾರವಾಗಿ ಹೊರಸಂಬಂಧಗಳನ್ನು ಮಾಡಿದ್ದಾಗಿ ಹೇಳಿದ್ದಾರೆ.

★ ಹೊರಸಂಬಂಧದ ಆಘಾತದಿಂದ ಹೊರಬಂದು ದಾಂಪತ್ಯವನ್ನು ಉಳಿಸಿಕೊಂಡ ಮೇಲೂ ಕೂಡ ಅದರ ರೋಚಕತೆ, ಆಕರ್ಷಣೆ ಮನಸ್ಸಿನಾಳದಲ್ಲಿ ಉಳಿದಿರುವ ಸಾಧ್ಯತೆಗಳಿರುತ್ತವೆ.

★ ಮೋಸ ಮಾಡುತ್ತಿರುವ ಪುರುಷರಲ್ಲಿ 68%ಗಿಂತ ಹೆಚ್ಚಿನವರಿಗೆ ಪಾಪಪ್ರಜ್ಞೆ ಕಾಡುತ್ತಿರುತ್ತದೆ.

★ ವರ್ಷಾನುಗಟ್ಟಲೆ ಒಟ್ಟಾಗಿ ಬದುಕಿದಾಗ ಮೂಡುವ ನಂಬಿಕೆಯನ್ನು ಒಮ್ಮೆ ಕಳೆದುಕೊಂಡ ಮೇಲೆ ಅದನ್ನು ಮತ್ತೆ ಕಂಡುಕೊಳ್ಳಲು ಸಾಕಷ್ಟು ಸಮಯದ ಅಗತ್ಯವಿದೆ. ಹಾಗಾಗಿ ಮೋಸ ಹೋಗಿರುವವರಿಗೆ ಎಲ್ಲವನ್ನೂ ಇದೇ ಕ್ಷಣ ಪರಿಹಾರ ಮಾಡಿಕೊಳ್ಳುವುದು ಸಾಧ್ಯವಿಲ್ಲವೆನ್ನುವ ಅರಿವಿರಬೇಕು. ಮೋಸ ಮಾಡಿರುವವರಿಗೆ ಇನ್ನೊಂದು ಅವಕಾಶವನ್ನು ನೀಡಲು ಅವರು ಸಿದ್ಧರಿರಬೇಕು.

★ ಹೊರಸಂಬಂಧ ಯಾವಾಗ, ಯಾರ ಜೊತೆ, ಎಷ್ಟು ಸಾರಿ, ಎಲ್ಲಿ, ಹೇಗೆ ನಡೆಯಿತು ಎನ್ನುವುದಕ್ಕಿಂತ ಅಂತಹ ಒತ್ತಡಗಳಿಗೆ ಬಲಿಯಾಗಲು ಸಾಧ್ಯವಾಗಿಸಿದ ಮನಃಸ್ಥಿತಿಯ ಬಗ್ಗೆ ಮುಕ್ತವಾಗಿ ಚರ್ಚೆ ಮಾಡಲು ಇಬ್ಬರೂ ಹಿಂಜರಿಯಬಾರದು. ಮೋಸಹೋದವರೂ ಕೂಡ ತಾನು ಸಂಗಾತಿಯ ಜೊತೆ ನಡೆದುಕೊಳ್ಳುತ್ತಿದ್ದ ರೀತಿ ತಮ್ಮಿಬ್ಬರ ನಡುವೆ ಮೂರನೆಯವರು ಬರಲು ಸಾಧ್ಯವಾಯಿತೆ ಎನ್ನುವ ಆತ್ಮಶೋಧನೆ ಮಾಡಿಕೊಳ್ಳುವ ಕಷ್ಟದ ಕೆಲಸಕ್ಕೆ ಹೆದರಬಾರದು. ಮೋಸ ಹೋದವರಿಗೆ ಆಗಿರುವ ಮಾನಸಿಕ ಆಘಾತಗಳೇನು, ಇಡೀ ಕುಟುಂಬ ಒಟ್ಟಾಗಿ ಅನುಭವಿಸಬೇಕಾದ ತೊಳಲಾಟಗಳೇನು, ಸಾಮಾಜಿಕ ಪರಿಣಾಮಗಳೇನು ಎನ್ನುವುದರ ಬಗ್ಗೆ ಇಬ್ಬರೂ ಮುಕ್ತವಾಗಿ ಮಾತನಾಡಬೇಕು. ಇಬ್ಬರ ಮನಸ್ಸಿನ ಗೊಂದಲ, ತೊಳಲಾಟ, ಕ್ಷೋಭೆಗಳನ್ನೆಲ್ಲಾ ಅರ್ಥ ಮಾಡಿಕೊಂಡು ಅವರಿಗೆ ಸ್ಪಷ್ಟವಾದ ಗುರಿಯನ್ನು ಇಟ್ಟುಕೊಂಡು ಕೆಲಸ ಮಾಡುವ ತರಬೇತಿ ನೀಡುವುದು ದಾಂಪತ್ಯ ಚಿಕಿತ್ಸಕನಿಗೆ ಸಾಧ್ಯವಾಗಬೇಕು.

★ ಎಲ್ಲಾ ವಿಷಯದ ಭಿನ್ನಾಭಿಪ್ರಾಯಗಳಂತೆ ಇದನ್ನೂ ಇಬ್ಬರೇ ಪರಿಹರಿಸಿಕೊಳ್ಳಬೇಕು. ಅಥವಾ ತಜ್ಞರ ಸಲಹೆ ಪಡೆಯಬೇಕು. ತಂದೆ–ತಾಯಿಯರು, ಸ್ನೇಹಿತರು ಮುಂತಾದ ಮೂರನೆಯವರ ಪ್ರವೇಶದಿಂದ ಸಮಸ್ಯೆಗಳು ಹೆಚ್ಚಾಗಬಹುದು.

★ ಮೋಸ ಮಾಡಿರುವ ಸಂಗಾತಿಯ ನಡೆನುಡಿಗಳಲ್ಲಿ ಪ್ರಾಮಾಣಿಕತೆ ಇಲ್ಲ ಎಂದು ಮತ್ತೊಬ್ಬರಿಗೆ ಅನ್ನಿಸಿದರೆ ಅವರು ತಮ್ಮ ಜೀವನದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸ್ವತಂತ್ರರಾಗಿರುತ್ತಾರೆ. ಆದರೆ ವಿಚ್ಛೇದನವನ್ನು ಆಯ್ಕೆ ಮಾಡಿಕೊಳ್ಳುವ ಮೊದಲು ದಾಂಪತ್ಯ ಚಿಕಿತ್ಸಕರ ಸಲಹೆ ಪಡೆಯುವುದು ಒಳ್ಳೆಯದು.

42ನೇ ಪುಟಕ್ಕೆ..

